C.R.P.67

| |
|---|
| Form No.4 (Civil) Deposition Sheets (R.P.No.57) |

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

ಎಸ್ ಸಿ ಸಂಖ್ಯೆಃ**113/2022**

ಪ್ರಾಸಾ. **08** ಚಾಸಾ. **08**

ಸಾಕ್ಷಿದಾರರ ಹೆಸರು ಮಲ್ಲೇಶ್

ತಂದೆಯ ಹೆಸರು ಶಿವಸ್ವಾಮಿ

ವಯಸ್ಸು **60** ವರ್ಷಗಳು

ಉದ್ಯೋಗ ಆಟೋ ಚಾಲಕ

ವಾಸ ದ್ಯಾವಪಟ್ಟಣ

ಸಾಕ್ಷಿಯನ್ನು ದಿನಾಂಕಃ**14.08.2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ರಿಂದ 3, 6, 7, 9 ಗೊತ್ತು. ನ್ಯಾಯಾಲಯದಲ್ಲಿರುವ ಆರೋಪಿತರು ಗೊತ್ತು, ಅವರನ್ನು ಮದುವೆಯಲ್ಲಿ ನೋಡಿದ್ದೇನೆ. ಚಾಸಾ-1 ರವರ ಮಗಳು ಸಂಧ್ಯಾ ಈಕೆಯ ಮದುವೆ 1ನೇ ಆರೋಪಿಯೊಂದಿಗೆ ಆಗಿತ್ತು. ಅವರ ಮದುವೆ ಮಾತುಕತೆಯ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮದುವೆಯ ಮಾತುಕತೆಯಲ್ಲಿ ಭಾಗವಹಿಸಿಲ್ಲ. ಕೊಡುವ ತೆಗೆದುಕೊಳ್ಳುವ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರ ಮಗಳು ಸಂಧ್ಯಾ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ, ಯಾವ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಗೊತ್ತಿಲ್ಲ. ಈ ಬಗ್ಗೆ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ. ನನಗೆ ಬೇರೆಯಾವುದೇ ವಿಚಾರ ಗೊತ್ತಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಾನು ಚಾಸಾ-1 ರವರ ಮಗಳು ಸಂಧ್ಯಾ ಮತ್ತು 1 ನೇ ಆರೋಪಿಯ ಮದುವೆಯ ಮಾತುಕತೆಯಲ್ಲಿ ಭಾಗವಹಿಸಿದ್ದೇನೆ ಎಂದರೆ ಸರಿಯಲ್ಲ. ಒಂದೂವರೆ ಲಕ್ಷ ಹಣ, ಒಂದು ಚಿನ್ನದ ಉಂಗುರ ವರದಕ್ಷಿಣೆಯಾಗಿ ಕೇಳಿದರು ಎಂದರೆ ಸರಿಯಲ್ಲ. ಚಾಸಾ-1 ಎಂಭತ್ತು ಸಾವಿರ ಕೊಡಲು ಒಪ್ಪಿದರು ಎಂದರೆ ಸರಿಯಲ್ಲ. ನಿಶ್ಚಿತಾರ್ಥದ ಸಮಯದಲ್ಲಿ 1 ನೇ ಆರೋಪಿಗೆ ಒಂದು ಚಿನ್ನದ ಉಂಗುರ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ10.06.2020 ರಂದು ರೂಪಾಯಿ ಎಂಭತ್ತು ಸಾವಿರ ಹಣವನ್ನು ಕೊಟ್ಟು ಬಂದಿರುವುದಾಗಿ ಚಾಸಾ-1 ರವರು ನನಗೆ ಹೇಳಿದರು ಎಂದರೆ ಸರಿಯಲ್ಲ.

2. ಕೆಲ ದಿನಗಳ ಹಿಂದೆ ಮೃತ ಸಂಧ್ಯಾ ಚಾಸಾ-1 ರವರ ಮನೆಯಲ್ಲಿ ಇದ್ದುದನ್ನು ನೋಡಿ ನಾನು ಕೇಳಿದಾಗ ಆರೋಪಿತರು ವರದಕ್ಷಿಣೆ ಕಿರುಕುಳ ಕೊಡುತ್ತಿದ್ದಾರೆ ಮತ್ತು ಸರಿಯಾಗಿ ನೋಡುಕೊಳ್ಳುತ್ತಿಲ ಮತ್ತು ಅದೇ ಕಾರಣದಿಂದ ಆಕೆ ತನ್ನ ಮನೆಯಲ್ಲಿ ಇರುವುದಾಗಿ ಚಾಸಾ-1 ರವರು ನನಗೆ ಹೇಳಿದರು ಎಂದರೆ ಸರಿಯಲ್ಲ. ರೂಪಾಯಿ ಐವತ್ತು ಸಾವಿರ ಹಣವನ್ನು ಚಾಸಾ-1 ರವರು ಕೊಟ್ಟಿರುವುದನ್ನು ನನಗೆ ಹೇಳಿದರು ಎಂದರೆ ಸರಿಯಲ್ಲ. ಆರೋಪಿತರು ವರದಕ್ಷಿಣೆ ಕಿರುಕುಳ ಕೊಡುತ್ತಿದ್ದುದರಿಂದ ಮತ್ತು ಆಕೆಯ ಶೀಲದ ಮೇಲೇ ಅನುಮಾನ ಪಡುತ್ತಿದ್ದುದರಿಂದ ಮೃತ ಸಂಧ್ಯಾ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದರೆ ಗೊತ್ತಿಲ್ಲ.

3. ಈಗ ಓದಿ ಹೇಳಿದ ರೀತಿ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದಿರಿ ಹೇಳಿಕೆಯ ಭಾಗವನ್ನು ನಿಪಿ-14 ಎಂದು ಗುರುತಿಸಲಾಯಿತು. ಆರೋಪಿತರು ನನಗೆ ಪರಿಚಯವಿರುದರಿಂದ ಅವರಿಗೆ

ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

(ಹತ್ತಿಕಾಳ ಪ್ರಭು ಎಸ್)
2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.